ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಆಯವ್ಯಯ/16ಯುಬಾ/84/2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:14.02.2022.

**:::: ಸುತ್ತೋಲೆ ::::**

ವಿಷಯ: ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕರು/ ತತ್ಸಮಾನ ವೃಂದದವರಿಗೆ ದಿನಾಂಕ:01.04.2019 ರಿಂದ 7ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆದ ಮಾಹೆಯವರೆಗೆ ವೇತನ ವ್ಯತ್ಯಾಸದ ಬಾಕಿ ಪಾವತಿಸಲು ಅಗತ್ಯ ಮಾಹಿತಿ ಒದಗಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ:10.02.2022 & 11.02.2022.

* * * *

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕರು/ ತತ್ಸಮಾನ ವೃಂದದವರಿಗೆ ದಿನಾಂಕ:01.01.2016 ರಿಂದ ಜಾರಿಗೆ ಬರುವಂತೆ 7ನೇ ಪರಿಷ್ಕೃತ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆದ ಮಾಹೆಯವರೆಗೆ ವೇತನ ವ್ಯತ್ಯಾಸದ ಬಾಕಿ ಪಾವತಿಸಲು ಅಗತ್ಯ ಮಾಹಿತಿಯನ್ನು ಆಯಾ ಕಾಲೇಜುಗಳಿಗೆ ನಿಗಧಿಪಡಿಸಿರುವ ದಿನಾಂಕದಂದು ಬೆಂಗಳೂರಿನ ಸರ್ಕಾರಿ ಆರ್.ಸಿ ಕಾಲೇಜಿಗೆ ಪ್ರಾಂಶುಪಾಲರು ಮತ್ತು ಒಬ್ಬ ಸಹಾಯಕರು ಖುದ್ದಾಗಿ ಹಾಜರಾಗಿ ಒದಗಿಸಲು ಸೂಚಿಸಲಾಗಿತ್ತು. ಆದರೆ ಇಲಾಖೆಯ ಮೇಲಧಿಕಾರಿಗಳು ಸರ್ಕಾರಿ ಆರ್.ಸಿ ಕಾಲೇಜಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರತಿಯೊಂದು ಕಾಲೇಜಿನಿಂದಲೂ ಅಗತ್ಯ ಸಂಖ್ಯೆಗಿಂತಲೂ ಅಧಿಕ ಸಿಬ್ಬಂದಿ ವರ್ಗದವರು ಹಾಜರಾಗಿರುವುದನ್ನು ಗಮನಿಸಲಾಯಿತು.

ಪ್ರಯುಕ್ತ ಪ್ರತಿ ಕಾಲೇಜಿನಿಂದ ಪ್ರಾಂಶುಪಾಲರನ್ನೊಳಗೊಂಡಂತೆ ಕೇವಲ ಇಬ್ಬರು ಮಾತ್ರ ಹಾಜರಾಗಿ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಒಂದು ಕಾಲೇಜಿನಿಂದ ಇಬ್ಬರಿಗಿಂತ ಹೆಚ್ಚು ಅಧಿಕಾರಿ/ಸಿಬ್ಬಂದಿ ವರ್ಗದವರು ಹಾಜರಾದ್ದಲ್ಲಿ ಅಂತಹ ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗವುದೆಂದು ತಿಳಿಸಲಾಗಿದೆ.

ಮುಂದುವರೆಯುತ್ತಾ, ದಾಖಲಾತಿಗಳನ್ನು ಸಲ್ಲಿಸಬೇಕಾದ ದಿನಾಂಕಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದ್ದು, ಸಂಬಂಧಿಸಿದ ಕಾಲೇಜುಗಳವರು ನಿಗದಿಪಡಿಸಿದ ಪರಿಷ್ಕೃತ ವೇಳಾಪಟ್ಟಿಯಂತೆ ಸರ್ಕಾರಿ ಆರ್.ಸಿ ಕಾಲೇಜಿಗೆ ಹಾಜರಾಗಿ, ಅಗತ್ಯ ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

**<u>ಪರಿಷ್ಕೃತ ವೇಳಾಪಟ್ಟಿ</u>**

| ಕ್ರ.ಸಂ. | ಜಿಲ್ಲೆ | ದಿನಾಂಕ & ಸಮಯ |
|---|---|---|
| 1 | ಉಡುಪಿ | 15.02.2022 – ಪೂರ್ವಾಹ್ನ 10.00 ಗಂಟೆಯಿಂದ |
| 2 | ದಕ್ಷಿಣ ಕನ್ನಡ | |
| 3 | ಕೊಡಗು | |
| 4 | ಧಾರವಾಡ | |
| 5 | ಹಾವೇರಿ | |
| 6 | ಉತ್ತರ ಕನ್ನಡ | |
| 7 | ಬೆಳಗಾವಿ | 16.02.2022 – ಪೂರ್ವಾಹ್ನ 10.00 ಗಂಟೆಯಿಂದ |
| 8 | ಬಾಗಲಕೋಟೆ | |
| 9 | ಬಿಜಾಪುರ | |
| 10 | ಗದಗ | |
| 11 | ರಾಯಚೂರು | |
| 12 | ವಿಜಯನಗರ | |

...2

| ಕ್ರ.ಸಂ. | ಜಿಲ್ಲೆ | ದಿನಾಂಕ & ಸಮಯ |
|---|---|---|
| 13 | ಕಲಬುರಗಿ | 17.02.2022 – ಪೂರ್ವಾಹ್ನ 10.00 ಗಂಟೆಯಿಂದ |
| 14 | ಬೀದರ್ | |
| 15 | ಯಾದಗಿರಿ | |
| 16 | ಕೊಪ್ಪಳ | |
| 17 | ಬಳ್ಳಾರಿ | |
| 18 | ದಾವಣಗೆರೆ | |
| 19 | ಚಿತ್ರದುರ್ಗ | 18.02.2022 – ಪೂರ್ವಾಹ್ನ 10.00 ಗಂಟೆಯಿಂದ |
| 20 | ಶಿವಮೊಗ್ಗ | |
| 21 | ಚಿಕ್ಕಮಗಳೂರು | |
| 22 | ಉಳಿಕೆ ಇರುವ ಕಾಲೇಜುಗಳು | |

ಉಳಿದಂತೆ ಈ ಹಿಂದೆ ದಿನಾಂಕ:10.02.2022 ಹಾಗೂ 11.02.2022ರಂದು ಹೊರಡಿಸಿರುವ ಸುತ್ತೋಲೆಯ ಸೂಚನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

**ಕಾಲೇಜು ಶಿಕ್ಷಣ ನಿರ್ದೇಶಕರು.**

**ಇವರಿಗೆ:**

ಇಲಾಖೆ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು:**

1 ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.

2 ಕಛೇರಿ ಪ್ರತಿ.